

# ಜಿಂಕೆ ಕೊಂಬಿನ ಕಮಾನು!

ಕಮಾನುಗಳು ಪ್ರವೇಶ ದ್ವಾರಕ್ಕೆ ಮುಕುಟವಿಟ್ಟಂತೆ. ಇದನ್ನು ಬೇರೆ ಬೇರೆ ವಸ್ತುಗಳಿಂದ ಮಾಡುತ್ತಾರೆ. ನೈಸರ್ಗಿಕವಾಗಿಯೂ ಕಮಾನುಗಳು ಅಂದವಾಗಿ ಶೋಭಿಸುತ್ತವೆ.

ಚಿತ್ರದಲ್ಲಿರುವ ಈ ಕಮಾನಿನ ಅನನ್ಯ ಸೌಂದರ್ಯ ನೋಡಿ. ಇದು ಅಮೆರಿಕದ ಜ್ಯಾಕ್ಸನ್ ಹೋಲ್ ಎನ್ನುವ ಪುಟ್ಟ ನಗರದ ಮಧ್ಯಭಾಗದಲ್ಲಿರುವ ಜಾರ್ಜ್ ವಾಷಿಂಗ್ಟನ್ ಮೆಮೋರಿಯಲ್ ಪಾರ್ಕ್‌ನಲ್ಲಿದ್ದು ಎಲ್ಲರ ಗಮನಸೆಳೆಯುತ್ತದೆ.  ಜಿಂಕೆಯ ಕೊಂಬುಗಳನ್ನು ಹೋಲುತ್ತದೆ ಈ ಕಮಾನು. ಆದರೆ ಇದನ್ನು ನಿರ್ಮಿಸಲು ಯಾವುದೇ ಎಲ್ಕ್ ಅಂದರೆ ಜಿಂಕೆಯಂತಿರುವ ಪ್ರಾಣಿಯನ್ನು ಕೊಲ್ಲಲಾಗಿಲ್ಲ. ಗಂಡು ಎಲ್ಕ್ ಮಿಕ್ಕ ಗಂಡು ಎಲ್ಕ್ ಗಳೊಡನೆ ಸ್ನೇಹ ಬೆಳೆಸಲು ಅಥವಾ ಜಗಳವಾಡಲು ಮತ್ತು ಹೆಣ್ಣು ಎಲ್ಕ್ ಗಳನ್ನು ಆಕರ್ಷಿಸಲು ಈ ಕೊಂಬುಗಳನ್ನು ಬೆಳೆಸಿಕೊಳ್ಳುತ್ತದೆ.

ಈ ಎಲ್ಕ್ ಗಳ ಕೊಂಬುಗಳಿಂದ ನಿರ್ಮಿಸಲ್ಪಟ್ಟ ಕಮಾನುಗಳು, ಅಬ್ಬಬ್ಬಾ ಅದಕ್ಕೆಷ್ಟು ಸಂಖ್ಯೆಯ ಎಲ್ಕ್‌ಗಳ ಕೊಂಬುಗಳನ್ನು ಬಳಸಲಾಗಿದೆಯೋ ಎಂದು ಅಚ್ಚರಿಪಡುವಷ್ಟರಲ್ಲಿ ಅದರ ವಿವರ ಅಲ್ಲೇ ನಿಮಗೆ ಸಿಗುತ್ತದೆ.

ಕೊಂಬುಗಳು ಬೆಳೆಯುವುದು ನಿಂತಾಗ ಅದರ ಎಲುಬುಗಳು ಶಿಥಿಲವಾಗಿ ಸತ್ತು ಹೋಗುತ್ತವೆ. ಮತ್ತು  ಪ್ರತಿ ವಸಂತ ಕಾಲದಲ್ಲೂ ತಳಿ ಋತುವಿನ ನಂತರ ಗಂಡು ಎಲ್ಕಿನ ಕೊಂಬುಗಳು  ತಾನೇ ತಾನಾಗಿ ಕಳಚಿಕೊಳ್ಳುತ್ತದೆ. ಪ್ರತಿ ವಸಂತದಲ್ಲೂ ಸುಮಾರು 5000 ಎಲ್ಕ್ ಗಳ ಕೊಂಬುಗಳು ಬಿದ್ದು ಹೋಗಿ ಅವುಗಳ ರಾಶಿಯೇ ಶೇಖರವಾಗುತ್ತದೆ. ಆಗ  ಪರಿಸರವನ್ನು ಶುದ್ಧವಾಗಿರಿಸುವ ದೃಷ್ಟಿಯಿಂದ ಸ್ಕೌಟ್ ಹುಡುಗರು ಈ ಕೊಂಬುಗಳನ್ನು ಶೇಖರಣೆ ಮಾಡಲು ಆರಂಭಿಸಿದರು. ಜ್ಯಾಕ್ಸನ್ ಹೋಲ್ ಎಲ್ಲೋ ಸ್ಟೋನಿಗೆ ಹತ್ತಿರವಿರುವುದರಿಂದ ಮತ್ತು ಅಲ್ಲಿ ಈ  ಪ್ರಾಣಿಗಳು ಅಸಂಖ್ಯಾತ ಸಂಖ್ಯೆಯಲ್ಲಿರುವುದರಿಂದ ಈ ಕಮಾನುಗಳನ್ನು ನಿರ್ಮಿಸಲು ಸಾಧ್ಯವಾಯಿತು.

ಪಾರ್ಕಿನ ನಾಲ್ಕು ಮೂಲೆಗಳಲ್ಲೂ ಒಂದೊಂದು ಕಮಾನನ್ನು ನಿರ್ಮಿಸಲಾಗಿದೆ. ಪ್ರತಿಯೊಂದು ಕಮಾನಿಗೂ 2000 ಕೊಂಬುಗಳ ಬಳಕೆಯಾಗಿದೆ. ಸದಾ  ಕಮಾನುಗಳ ಮೇಲೆ ಬೀಳುವ  ಬಿಸಿಲು ಮತ್ತು ಮಂಜಿನ ಪರಿಣಾಮ ಅವು ಶಿಥಿಲವಾಗಿ ಮುರಿದು ಹೋಗುತ್ತದೆ.  ಆದ್ದರಿಂದ ಪ್ರತಿ ಐವತ್ತು ವರ್ಷಕ್ಕೊಮ್ಮೆ ಅದರ ಮರು ನಿರ್ಮಾಣವಾವಾಗುತ್ತದೆ. ಮೊತ್ತ ಮೊದಲ ಕಮಾನನ್ನು 1953ರಲ್ಲಿ ಜ್ಯಾಕ್ಸನ್  ಹೋಲಿನ ರೋಟರಿ ಕ್ಲಬಿನವರು ನಿರ್ಮಾಣ ಮಾಡಿದರು. 1960ರ ಹೊತ್ತಿಗೆ ಮಿಕ್ಕ ಕಮಾನುಗಳು ಸಿದ್ಧಗೊಂಡವು.  2006ರಲ್ಲಿ ಮೊಟ್ಟ ಮೊದಲ ಕಮಾನನ್ನು ಮರು ನಿರ್ಮಾಣ ಮಾಡಲಾಯಿತು. ಅಂತೂ ಜ್ಯಾಕ್ಸನ್ ಹೋಲ್ ಗೆ ಹೋದವರು ಈ ಕಮಾನನ್ನು ನೋಡದೆ ಅದರ ಫೋಟೊ ತೆಗೆಯದೇ ಬರುವುದಿಲ್ಲ. ಅಂತಹ ಮನ ಸೆಳೆಯುವ ಅದ್ಭುತ ಕಮಾನಿದು.

■ ಮಂಜುಳಾ ರಾಜ್